## **2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ

ಸೆಷನ್ಸ್ ಕೇಸ್ ನಂ.**54/2022**
ಪಿ.ಡಬ್ಲೂ.**01**
ಸಿ.ಡಬ್ಲೂ.**04**

ಸಾಕ್ಷಿದಾರರ ಹೆಸರು : ಮೆಹಬೂಬ ವಾಲೀಕಾರ

ತಂದೆಯ ಹೆಸರು : ಅಬ್ದುಲಗನಿ

ವಯಸ್ಸು : 41 ವರ್ಷ.

ಉದ್ಯೋಗ : ವ್ಯಾಪಾರ

ವಾಸಸ್ಥಳ : ಕಸ್ತೂರಿ ಕಾಲೋನಿ, ವಿಜಯಪುರ.

ಇಂದು ದಿನಾಂಕ **04-10-2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

**1)** ಸಾಕ್ಷಿಗೆ ದಿನಾಂಕ**: 21-12-2020** ರ ಇಕ್ವೆಸ್ಟ್ ಪಂಚನಾಮೆ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ಒಪ್ಪಿದ್ದರಿಂದ ಅದನ್ನು ನಿ.ಪಿ.**-1** ಅಂತಾ ಸಾಕ್ಷಿಯ ಸಹಿಯನ್ನು ನಿ.ಪಿ.**-1**(ಎ) ಅಂತಾ ಗುರುತಿಸಲಾಯಿತು. ನಿ.ಪಿ.**-1** ಕ್ಕೆ ಸಹಿಯನ್ನು ದಿನಾಂಕ**: 21-12-2020** ರಂದು ಮುಂಜಾನೆ **8-30** ರಿಂದ **10-00** ಗಂಟೆ ಸಮಯದಲ್ಲಿ ಪೋಲಿಸರು ನಬಿರಸೂಲ ತಂದೆ ದಾವಲಸಾಬ ನರಸಲಗಿ ಇವನ ಶವ ಪಂಚನಾಮೆಯನ್ನು ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನ್ನ ಜೊತೆ ಚಾಸಾ**-5** ಫಿರೋಜ ಸಹ ಸದರಿ ಪಂಚನಾಮೆಗೆ ಸಾಕ್ಷಿ ಅಂತಾ ಸಹಿ ಮಾಡಿರುತ್ತಾರೆ.

**2)** ಸಾಕ್ಷಿಗೆ ಒಂದುಫೋಟೋವನ್ನು ತೋರಿಸಲಾಗಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಸದರಿ ಫೋಟೋವನ್ನು ನಿ.ಪಿ.**-2** ಅಂತಾ ಗುರುತಿಸಲಾಯಿತು. ಉಳಿದ ಫೋಟೋಗಳನ್ನು ಸದರಿ ಫೋಟೋಗಳನ್ನು ಪೋಲಿಸರು ಶವ ಪಂಚನಾಮೆ ಕಾಲಕ್ಕೆ ತೆಗೆದಿದ್ದರು ಅಂತಾ ಗುರುತಿಸಿದ್ದರಿಂದ ಸದರಿ ಪೋಟೋಗಳನ್ನು ನಿ.ಪಿ.**-3** ರಿಂದ **7** ಅಂತಾ ಗುರುತಿಸಲಾಯಿತು. ಮೃತ ನಬಿರಸೂಲನನ್ನು ಕೊಲೆ ಮಾಡಲಾಗಿತ್ತು ಅಂತಾ ನನಗೆ ತಿಳಿದು ಬಂದಿತ್ತು. ಈ ಕಾರಣಕ್ಕಾಗಿ ನಿ.ಪಿ.**-1** ರ ಪ್ರಕಾರ ಪಂಚನಾಮೆಯನ್ನು ಪೋಲಿಸರು ಜರುಗಿಸಿದ್ದರು.

## ಪಾಟೀ ಸವಾಲುಃ ಶ್ರೀ.ಜಿ.ಎ.ಎ.ವಕೀಲರಿಂದ ಆರೋಪಿತನ ಪರವಾಗಿ

1) ನನ್ನ ಮನೆ ವಿಜಯಪುರದ ಕಸ್ತೂರಿನ ನಗರದಲ್ಲಿ ಇದೆ. ಮೃತನ ಮನೆ ಚಪ್ಪರಬಂದ ಕಾಲೋನಿಯಲ್ಲಿ ಇದೆ. ನನ್ನ ಮತ್ತು ಮೃತನ ಮನೆಯ ನಡುವೆ ಒಂದು ಕೋಟೆ ಗೋಡೆ ಅಷ್ಟೆ ಅಡ್ಡ ಇದೆ. ನನ್ನನ್ನು ಚಾಸಾ-1 ಪಂಚನಾಗಿ ಸಹಕರಿಸುವಂತೆ ಕೇಳಿದ್ದರು. ನಾನು ವಿಜಯಪುರದ ಸರಕಾರಿ ಆಸ್ಪತ್ರೆಗೆ ಬೆಳಿಗ್ಗೆ 8-30 ಸಮಯಕ್ಕೆ ಹೋಗಿದ್ದೆ. ನಿ.ಪಿ.-2 ರಲ್ಲಿ ಮಹಜರ ಕ್ರಮ ಜರುಗಿಸಿದ ಬಗ್ಗೆ ಕಂಡು ಬರುವುದಿಲ್ಲ ಅಂದರೆ ಸರಿ. ನಿ.ಪಿ.-1 ಪಂಚನಾಮೆ ಗಣಕಿಕೃತ ಇದೆ ಅಂದರೆ ಸರಿ. ನಿ.ಪಿ.-1 ಕ್ಕೆ ನಾನು ಪೋಲಿಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿ. ನಿ.ಪಿ.-1 ನ್ನು ತಯಾರು ಮಾಡಲು ಯಾರು ಮಾಹಿತಿ ನೀಡಿರುತ್ತಾರೆ ಅಂತಾ ಮಾಹಿತಿ ಇಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ. )
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**04/10/2023**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸೆಷನ್ಸ್ ಕೇಸ್ ನಂ.54/2022
ಪಿ.ಡಬ್ಲೂ.02
ಸಿ.ಡಬ್ಲೂ.02

ಸಾಕ್ಷಿದಾರರ ಹೆಸರು : ರಾಹುಲ ಲೊಂಡೆ

ತಂದೆಯ ಹೆಸರು : ಸುನೀಲ

ವಯಸ್ಸು : 28 ವರ್ಷ.

ಉದ್ಯೋಗ : ಕೂಲಿ

ವಾಸಸ್ಥಳ : ರಾಣಿ ಬಗಿಚಾ, ವಿಜಯಪುರ.

ಇಂದು ದಿನಾಂಕ **04-10-2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

**1)** ಸಾಕ್ಷಿಗೆ ದಿನಾಂಕ: **21-12-2020** ರ **1** ನೇ ಆರೋಪಿ ಇವನ ಕಡೆಯಿಂದ ವಶಪಡಿಸಿಕೊಂಡ ಮೋಟಾರ ಸೈಕಲ್ ಜಪ್ತಿ ಪಂಚನಾಮೆ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ಒಪ್ಪಿದ್ದರಿಂದ ಅದನ್ನು ನಿ.ಪಿ.**-8** ಅಂತಾ ಸಾಕ್ಷಿಯ ಸಹಿಯನ್ನು ನಿ.ಪಿ.**-8(ಎ)** ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಅವುಗಳನ್ನು ನಿ.ಪಿ.**-9** ಮತ್ತು **10** ಅಂತಾ ಗುರುತಿಸಲಾಯಿತು.

**2)** ನಿ.ಪಿ.**-8** ರಲ್ಲಿ ಏನೂ ಬರೆದಿದೆ ಅಂತಾ ನನಗೆ ಗೊತ್ತಿಲ್ಲ. ನನ್ನ ಗಾಡಿಯನ್ನು ಪೋಲಿಸರು ಹಿಡಿದುಕೊಂಡಿದ್ದರು ಆ ಕಾಲಕ್ಕೆ ನಾನು ಠಾಣೆಗೆ ಹೋದಾಗ ನಿ.ಪಿ.**-8** ರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಮಹಜರ ಮಾಡಿ ಪೋಲಿಸರು ಯಾವುದೇ ಮೋಟಾರ ಸೈಕಲನ್ನು ವಶಕ್ಕೆ ತೆಗೆದುಕೊಂಡಿರುವುದಿಲ್ಲ. ಪೋಲಿಸರು ನಿ.ಪಿ.**-9** ಮತ್ತು **10** ಫೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಅಂತಾ ಹೇಳಲು ಆಗುವುದಿಲ್ಲ.

**3)** ಸಾಕ್ಷಿಗೆ ದಿನಾಂಕ: **21-12-2020** ರ **1** ನೇ ಆರೋಪಿ ಇವನ ಕಡೆಯಿಂದ ಗುನ್ಹೆ ಕಾಲಕ್ಕೆ ತೊಟ್ಟ ಬಟ್ಟೆ ಮತ್ತು ರಾಡ ಜಪ್ತಿ ಪಂಚನಾಮೆ ಮೇಲೆ ಇರುವ ಸಹಿಯನ್ನು ತೋರಿಸಲಾಗಿ

ಒಪ್ಪಿದ್ದರಿಂದ ಅದನ್ನು ನಿ.ಪಿ.-11 ಅಂತಾ ಸಾಕ್ಷಿಯ ಸಹಿಯನ್ನು ನಿ.ಪಿ.-11(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಅವುಗಳನ್ನು ನಿ.ಪಿ.-12 ಮತ್ತು 13 ಅಂತಾ ಗುರುತಿಸಲಾಯಿತು.

4) ನಿ.ಪಿ.-11 ರಲ್ಲಿ ಏನೂ ಬರೆದಿದೆ ಅಂತಾ ನನಗೆ ಗೊತ್ತಿಲ್ಲ. ನನ್ನ ಗಾಡಿಯನ್ನು ಪೋಲಿಸರು ಹಿಡಿದುಕೊಂಡಿದ್ದರು ಆ ಕಾಲಕ್ಕೆ ನಾನು ಠಾಣೆಗೆ ಹೋದಾಗ ನಿ.ಪಿ.-11 ರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಮಹಜರ ಮಾಡಿ ಪೋಲಿಸರು ಯಾವುದೇ ಬಟ್ಟೆ ಮತ್ತು ರಾಡನ್ನು ವಶಕ್ಕೆ ತೆಗೆದುಕೊಂಡಿರುವುದಿಲ್ಲ. ಪೋಲಿಸರು ನಿ.ಪಿ.-12 ಮತ್ತು 13 ಫೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಅಂತಾ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕ-2 ಮತ್ತು 3 ಇವರಿಗೆ ಸಂಬಂಧ ಪಟ್ಟ ಮಹಜರಗಳಿಗೆ ಇದೇ ಸಾಕ್ಷಿದಾರ ಸಹಿ ಹಾಕಿದ್ದರಿಂದ ಅವುಗಳನ್ನು ಸಹ ನಿಶಾನೆಯಾಗಿ ಗುರುತಿಸಿ ಸಾಕ್ಷಿದಾರ ಹೇಳಿಕೆಯನ್ನು ಆ ಬಗ್ಗೆ ದಾಖಲ ಮಾಡಿಕೊಳ್ಳಬೇಕು ಅಂತಾ ಕೇಳಿದ್ದು ಆದರೆ ಕಾನೂನಿಗೆ ಸಂಘರ್ಷಕ್ಕೆ ಒಳಗಾದ ಬಾಲಕ 2 ಮತ್ತು 3 ಇವರಿಗೆ ಸಂಬಂಧ ಪಟ್ಟ ಪ್ರಕರಣ ಈ ನ್ಯಾಯಾಲಯದ ಮುಂದೆ ಇಲ್ಲದೇ ಇರುವುದರಿಂದ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಲಾಗಿದೆ. )

(ಈ ಹಂತದಲ್ಲಿ ಸಾಕ್ಷಿಯು ಮಹಜರಗೆ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ</u>

1) ದಿನಾಂಕ: 21-12-2020 ಬೆಳಿಗ್ಗೆ 7-15 ರಿಂದ 8-00 ಗಂಟೆ ಸಮಯದಲ್ಲಿ ಪೋಲಿಸರು ಪೋಲಿಸ ಠಾಣಾ ಆವರಣದಲ್ಲಿ ನನ್ನ ಮತ್ತು ಚಾಸಾ-3 ಇವರ ಸಮಕ್ಷಮ 1 ನೇ ಆರೋಪಿ ಹಾಜರ ಪಡಿಸಿದ ಹೊಂಡಾ ಕಂಪನಿಯ ಬಿಳಿ ಬಣ್ಣದ ಅಕ್ಟಿವಾ ಕೆ.ಎ-28 ಇಜಿ -4133 ಇದನ್ನು ನಿ.ಪಿ.-8 ರ ಪ್ರಕಾರ ಮಹಜರ ಮಾಡಿ ಜಪ್ತಿ ಪಡಿಸಿಕೊಂಡಿದ್ದರು ಅಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಠಾಣೆಯಲ್ಲಿ ಹಾಜರ ಇದ್ದು ನಿ.ಪಿ.-8 ರ ಅಂಶಗಳನ್ನು ಓದಿ ತಿಳಿದುಕೊಂಡು

ಸಹಿ ಮಾಡಿದ್ದೇ ಅಂದರೆ ಸರಿಯಲ್ಲ. ಅದೇ ಕಾಲಕ್ಕೆ ಪೋಲಿಸರು ನಿ.ಪಿ.-9 ಮತ್ತು 10 ರಂತೆ ಫೋಟೋಗಳನ್ನು ತೆಗೆದಿದ್ದರು ಅಂದರೆ ಸರಿಯಲ್ಲ.

2) ಅದೇ ದಿನ ಮಧ್ಯಾನ 12-15 ರಿಂದ 1-00 ಗಂಟೆ ಸಮಯದಲ್ಲಿ 1 ನೇ ಆರೋಪಿ ಮನೆಯಲ್ಲಿ ಪೋಲಿಸರು ನನ್ನ ಮತ್ತು ಚಾಸಾ-3 ಇವರ ಸಮಕ್ಷಮ 1 ನೇ ಆರೋಪಿ ತಾಜು ಘಟನೆ ಕಾಲಕ್ಕೆ ಧರಿಸಿದ್ದ ಬಟ್ಟೆ ಮತ್ತು ಪ್ರಕರಣಕ್ಕೆ ಉಪಗೋಯಿಸಿದ ರಾಡ್ ಹಾಜರ ಪಡಿಸಿದ್ದನ್ನು ನಿ.ಪಿ.-11 ರ ಪ್ರಕಾರ ಮಹಜರ ಮಾಡಿ ಜಪ್ತಿ ಪಡಿಸಿಕೊಂಡಿದ್ದರು ಅಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಆರೋಪಿತನ ಮನೆಯಲ್ಲಿ ಹಾಜರ ಇದ್ದು ನಿ.ಪಿ.-11 ರ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇ ಅಂದರೆ ಸರಿಯಲ್ಲ. ಅದೇ ಕಾಲಕ್ಕೆ ಪೋಲಿಸರು ನಿ.ಪಿ.-12 ಮತ್ತು 13 ರಂತೆ ಫೋಟೋಗಳನ್ನು ತೆಗೆದಿದ್ದರು ಅಂದರೆ ಸರಿಯಲ್ಲ. ಸಾಕ್ಷಿಗೆ ನಿ.ಪಿ.-9 ಮತ್ತು 10 ರಲ್ಲಿರುವ ಮೋಟಾರ ಸೈಕಲ್ ಮತ್ತು ನಿ.ಪಿ.-12 ರಲ್ಲಿರುವ ಬಟ್ಟೆ ಮತ್ತು ನಿ.ಪಿ.-13 ರಲ್ಲಿರುವ ರಾಡು ಮತ್ತು ನ್ಯಾಯಾಲಯದ ಮುಂದೆ ಇರುವ ರಾಡ್ ಮತ್ತು ಬಟ್ಟೆ ತೋರಿಸಲಾಗಿ ಗುರುತಿಸುವಲ್ಲಿ ವಿಫಲರಾಗಿರುತ್ತಾರೆ.

3) ನಾನು ನಿ.ಪಿ.-8 ಮತ್ತು 11 ರ ಮಹಜರ ಸಮಯದಲ್ಲಿ ಹಾಜರ ಇದ್ದರೂ ಸಹ, ಪೋಲಿಸರು ನನ್ನ ಸಮಕ್ಷಮ ಮೋಟಾರ ಸೈಕಲ್ ಮತ್ತು ಬಟ್ಟೆ, ರಾಡ್ ಇವುಗಳನ್ನು ವಶಪಡಿಸಿಕೊಂಡಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಬೇಕು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ಕಾಲಕ್ಕೆ ಪೋಲಿಸರು ನನ್ನ ಹೇಳಿಕೆಯನ್ನು ಈಗ ಓದಿ ಹೇಳಿದಂತೆ " ನಾನು ಮೇಲಿನ ವಿಳಾಸದ _ _ _ _ _ ಪಂಚನಾಮೆಗೆ ಸಹಿ ಮಾಡಿರುತ್ತೇನೆ." ಅಂತಾ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-14 ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ.ಜಿ.ಎ.ಎ. ವಕೀಲರಿಂದ ಆರೋಪಿತನ ಪರವಾಗಿ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ. )
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**04/10/2023**

## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ

ಸೆಷನ್ಸ್ ಕೇಸ್ ನಂ.54/2022
ಪಿ.ಡಬ್ಲೂ.03
ಸಿ.ಡಬ್ಲೂ.01

ಸಾಕ್ಷಿದಾರರ ಹೆಸರು : ಸದ್ದಾಮಹುಸೇನ ನರಸನಗಿ

ತಂದೆಯ ಹೆಸರು : ದಾವಲಸಾಬ

ವಯಸ್ಸು : 33 ವರ್ಷ.

ಉದ್ಯೋಗ : ಚಾಲಕ

ವಾಸಸ್ಥಳ : ಚಪ್ಪರಬಂದ ಗಲ್ಲಿ, ವಿಜಯಪುರ.

ಇಂದು ದಿನಾಂಕ 04-10-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ

1) ಚಾಸಾ-10, 11 ನನ್ನ ಅಣ್ಣಂದಿರು. ಚಾಸಾ-12 ನನ್ನ ನೆರಹೊರೆಯವರು. ಚಾಸಾ-13 ನನ್ನ ಸ್ನೇಹಿತ. ಚಾಸಾ-14 ನನ್ನ ನೆರಹೊರೆಯವರು, ಚಾಸಾ-15 ಚಾಸಾ-10 ಇವರ ಹೆಂಡತಿ ನನ್ನ ಅತ್ತಿಗೆ. ಚಾಸಾ-16 ನನ್ನ ತಮ್ಮ ಮೃತ ನಬಿರಸೂಲ ಇತನ ಹೆಂಡತಿ. ಚಾಸಾ-18 ನನಗೆ ಪರಿಚಯ ಇದ್ದಾರೆ. ಚಾಸಾ-17,19 ರಿಂದ 20 ಪರಿಚಯ ಇಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇದೆ.

2) ನಮ್ಮ ಮನೆ ವಿಜಯಪುರದ ಚಪ್ಪರಬಂದ ಗಲ್ಲಿ ರಾಯಲ್ ಹೋಟೆಲ ಹಿಂದೆ ಇರುತ್ತದೆ. ನಮ್ಮ ತಂದೆಗೆ ಒಟ್ಟು 8 ಜನ ಮಕ್ಕಳು ಅದರಲ್ಲಿ 4 ಗಂಡು ಮಕ್ಕಳು ಮತ್ತು 4 ಹೆಣ್ಣು ಮಕ್ಕಳು. ಮೃತ ನಬಿರಸೂಲ ನನ್ನ ತಮ್ಮ ಕೊನೆಯವನು. ಆತ ತನ್ನ ಜೀವಿತಕಾಲದಲ್ಲಿ ಸೆಂಟರಿಂಗ್ ಕೆಲಸ ಮಾಡಿಕೊಂಡು ಇದ್ದ. ಮೃತನಿಗೆ ಮೂರು ಜನ ಮಕ್ಕಳು ಇದ್ದಾರೆ. ಅದರಲ್ಲಿ ಒಂದು ಹೆಣ್ಣು ಎರಡು ಗಂಡು ಮಕ್ಕಳು. ಆತ ಮುಂಜಾನೆ 9-00 ಗಂಟೆಗೆ ಸೆಂಟರಿಂಗ್ ಕೆಲಸಕ್ಕೆ ಹೋಗಿ ಸಂಜೆ 6-00 ಗಂಟೆಗೆ ವಾಪಸ ಬರುತ್ತಿದ್ದ. ನಾನು ಟಂ ಟಂ

ವಾಹನ ಚಲಾಯಿಸುತ್ತೇನೆ.

**3)** ನನ್ನ ತಮ್ಮ ನಬಿರಸೂಲ ಈಗ ಇಲ್ಲ. ಆರೋಪಿಗೆ ಸೇರಿದ ಒಂದು ಪಾನ ಶಾಪ ವಿಜಯಪುರದ ಗೋಲಗುಮ್ಮಜ ಎದುರುಗಡೆ ಇದೆ. ಆರೋಪಿಯ ಪಾನಶಾಪಗೆ ನನ್ನ ತಮ್ಮ ನಬಿರಸೂಲ ಆಗ್ಗಾಗ ಹೋಗಿ ಬರುವುದು ಮಾಡುತ್ತಿದ್ದ. ನನ್ನ ತಮ್ಮನಿಗೂ ನ್ಯಾಯಾಲಯದ ಮುಂದೆ ಇರುವ ಆರೋಪಿತನಿಗೂ ಗುಟಕಾದ ಹಣ ರೂ. **2000/-** ವಿಚಾರದಲ್ಲಿ ಗಲಾಟೆ ಆಗಿತ್ತು. ನನ್ನ ತಮ್ಮ ಆರೋಪಿತನಿಗೆ ರೂ. **2000/-**ಗಳನ್ನು ಕೊಡಬೇಕಾಗಿತ್ತು. ಆ ವಿಚಾರದಲ್ಲಿ ಎರಡು ಬಾರಿ ಗಲಾಟೆ ಆಗಿದ್ದು ನನ್ನ ಗಮನಕ್ಕೆ ಇದೆ. ಅದಕ್ಕಿಂತ ಮುಂಚೆಯು ಸಹ ಗಲಾಟೆ ಆಗಿತ್ತು. ಈ ವಿಚಾರವನ್ನು ನನ್ನ ತಮ್ಮ ನನ್ನ ಮುಂದೆ ಮತ್ತು ಆತನ ಹೆಂಡತಿ ಮುಂದೆ ಹೇಳಿದ್ದ. ದಿನಾಂಕ: **19-12-2020** ರಂದು ಸಂಜೆ **6-00** ರಿಂದ **8-00** ಗಂಟೆ ಅವಧಿಯಲ್ಲಿ ಆರೋಪಿ ನನ್ನ ತಮ್ಮನಿಗೆ ರಾಡನಿಂದ ಹೊಡೆಬಡಿ ಮಾಡಿದ್ದ, ಆ ವಿಚಾರವನ್ನು ನನಗೆ ತೋರಿಸಿ ಹೇಳಿದ್ದ. ದಿನಾಂಕ: **20-12-2020** ರಂದು ಮುಂಜಾನೆ **10-00** ರಿಂದ **11-00** ಗಂಟೆಗೆ ಸುಮಾರಿಗೆ ನಾನು ನನ್ನ ಟಂ ಟಂ ತೆಗೆದುಕೊಂಡು ಹೋರಟಿದ್ದಾಗ ನನ್ನ ತಮ್ಮ ಮೃತ ನಬಿರಸೂಲ ಈತ ಆರೋಪಿಯ ಪಾನಶಾಪ ಮುಂದುಗಡೆ ನಿಂತಿದ್ದ ನಾನು ಅವರಿಬ್ಬರು ಏನಾದರೂ ಮಾತನಾಡುತ್ತಿರಬಹುದು ಅಂತಾ ಹೋಗಿದ್ದೆ. ಆ ದಿನ **4-00** ಗಂಟೆ ಸುಮಾರಿಗೆ ನಾನು ಹಕಿಂ ಚೌಕನಲ್ಲಿ ಇದ್ದಾಗ ನನಗೆ ನನ್ನ ತಮ್ಮ ನಬಿರಸೂಲ ಇತನಿಗೆ ಸ್ಟೇಶನ್ ಬ್ಯಾಕ ರೋಡ ಕೋಟೆಗೋಡೆಗೆ ಹೊಂದಿಕೊಂಡಿರುವ ಕಂಟಿಗಳಲ್ಲಿ ಕೊಲೆ ಮಾಡಿದ್ದಾರೆ ಅಂತಾ ಗೊತ್ತಾಯಿತು. ಅದನ್ನು ಕೇಳಿ ನಾನು ಮನೆಗೆ ಹೋಗಿದ್ದೆ. ಹೋಗಿ ನನ್ನ ಅಣ್ಣತಮ್ಮಂದಿರಿಗೆ ಮತ್ತು ನನ್ನ ಅತ್ತಿಗೆಯಂದಿರಿಗೆ ಮತ್ತು ಮೃತನ ಹೆಂಡತಿಗೆ ವಿಷಯ ಹೇಳಿ ಅವರನ್ನು ಸ್ಥಳಕ್ಕೆ ಕರೆದುಕೊಂಡು ಹೋದೆ. ಅಲ್ಲಿ ಹೋಗಿ ನೋಡಲಾಗಿ ನನ್ನ ತಮ್ಮ ನಬಿರಸೂಲ ಇತನ ಹೆಣ ಬಿದ್ದಿತ್ತು. ಆತನ ಮೂಗಿನಿಂದ, ಕಿವಿಯಿಂದ, ಬಾಯಿಯಿಂದ ರಕ್ತ ಬಂದಿತ್ತು. ಆತನ ಕಾಲಿಗೆ, ಬೆನ್ನಿಗೆ ಮತ್ತು ಹಣೆಯಲ್ಲಿ ರಕ್ತ ಗಾಯಗಳಾಗಿತ್ತು. ಅಲ್ಲಿ ಪಕ್ಕದಲ್ಲಿ ಸುಮಾರು ನಾಲ್ಕು ಹಲ್ಲೆಗೆ ಉಪಯೋಗ ಮಾಡಿದ ಕಲ್ಲುಗಳು ಬಿದ್ದಿದ್ದವು.

ನಾನು ಹೋಗುವಷ್ಟರಲ್ಲಿ ಸ್ಥಳಕ್ಕೆ ಪೋಲಿಸರು ಬಂದಿದ್ದರು. ಪೋಲಿಸರು ಸ್ಥಳದಲ್ಲಿ ಮೃತನ ಶವದ ಫೋಟೋವನ್ನು ತೆಗೆದುಕೊಂಡು ಶವವನ್ನು ಸರಕಾರಿ ಆಸ್ಪತ್ರೆಗೆ ಹೋದರು ಸ್ಥಳದಲ್ಲಿ ನನ್ನ ತಮ್ಮನ ಚಪ್ಪಲ ಬಿದ್ದಿತ್ತು. ನಾನು ಈ ಬಗ್ಗೆ ಪೋಲಿಸರಿಗೆ ಸಂಜೆ **6-45** ಗಂಟೆ ಸುಮಾರಿಗೆ ಫಿರ್ಯಾದನ್ನು ನೀಡಿದ್ದೆ. ಸಾಕ್ಷಿಗೆ ದಿನಾಂಕ: **20-12-2020** ರ ಫಿರ್ಯಾದಿಯನ್ನು ತೋರಿಸಲಾಗಿ ಅದರಲ್ಲಿರು ತನ್ನ ಸಹಿಯನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿ.ಪಿ.**-15** ಅಂತಾ ಸಾಕ್ಷಿಯ ಸಹಿಯನ್ನು ನಿ.ಪಿ.**-15(ಎ)** ಅಂತಾ ಗುರುತಿಸಲಾಯಿತು. ಸದರಿ ಫಿರ್ಯಾದನ್ನು ಚಾಸಾ**-13** ಇವರಿಗೆ ನಾನು ಹೇಳಿ ಬರೆಯಿಸಿ ಪೋಲಿಸರಿಗೆ ನೀಡಿರುತ್ತೇನೆ.

**4)** ಪೋಲಿಸರು ಆಸ್ಪತ್ರೆಯಲ್ಲಿ ಶವ ಪಂಚನಾಮೆಯನ್ನು ಅದೇ ದಿನ ಜರುಗಿಸಿರುತ್ತಾರೆ. ಸಾಕ್ಷಿಗೆ ನಿ.ಪಿ.**-2** ರಿಂದ **7** ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಂಡು ಬರುವ ಶವ ನನ್ನ ಮೃತ ತಮ್ಮನದ್ದು ಅಂತಾ ಗುರುತಿಸಿರುತ್ತಾರೆ.

**5)** ಘಟನಾ ಸ್ಥಳಕ್ಕೆ ಪೋಲಿಸರು ಮರುದಿನ ನನ್ನನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿ ಚಾಸಾ**-6** ಮತ್ತು **7** ಬಂದಿದ್ದರು. ಅಲ್ಲಿ ಕೊಲೆ ಆಗಿದೆ ಅಂತಾ ಹೇಳಿದ್ದೆ ಅಲ್ಲಿ ಕಲ್ಲು ಮತ್ತು ಚಪ್ಪಲಿ ಬಿದ್ದಿತ್ತು ಅವುಗಳನ್ನು ಪೋಲಿಸರು ತೆಗೆದುಕೊಂಡು ಹೋದರು. ಅಲ್ಲಿ ಪೋಲಿಸರು ಮಹಜರ ಮಾಡಿರುತ್ತಾರೆ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಅವುಗಳನ್ನು ನಿ.ಪಿ.**-16** ಮತ್ತು **17** ಅಂತಾ ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಒಂದು ಜೊತೆ ಚಪ್ಪಲಗಳನ್ನು ತೋರಿಸಲಾಗಿ ಸದರಿ ಚಪ್ಪಲಗಳು ತನ್ನ ತಮ್ಮನಿಗೆ ಸಂಬಂಧಿಸಿದ್ದು ಅಂತಾ ಗುರುತಿಸಿದ್ದರಿಂದ ಅವುಗಳನ್ನು ಎಮ್.ಓ.**-1** ಅಂತಾ ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಐದು ಕಲ್ಲುಗಳನ್ನು ತೋರಿಸಲಾಗಿ ಅವುಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಎಮ್.ಓ.**-2** ರಿಂದ **6** ಅಂತಾ ಗುರುತಿಸಲಾಯಿತು. ಪೋಲಿಸರು ಸ್ಥಳದಿಂದ ರಕ್ತ ಹತ್ತಿದ ಮಣ್ಣು ಮತ್ತು ರಕ್ತ ಹತ್ತಲಾರದ ಮಣ್ಣು ತೆಗೆದುಕೊಂಡಿರುತ್ತಾರೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಎಮ್.ಓ.-

7 ಮತ್ತು 8 ಅಂತಾ ಗುರುತಿಸಲಾಯಿತು.

6) ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿದ್ದರು. ಅಲ್ಲಿ ನಾಲ್ಕು ಜನ ಆರೋಪಿತರನ್ನು ತೋರಿಸಿ ನನ್ನ ತಮ್ಮನನ್ನು ಇವರೇ ಕೊಲೆ ಮಾಡಿದ್ದು ಅಂತಾ ಹೇಳಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ವಿರೇಶ 1 ನೇ ಆರೋಪಿ ನೋಡಿ ಗುರುತಿಸುತ್ತಾರೆ. 1 ನೇ ಆರೋಪಿ ಜೊತೆ ಇನ್ನು ಮೂರು ಜನ ಮಕ್ಕಳು ಠಾಣೆಯಲ್ಲಿ ಇದ್ದರು. ಪೋಲಿಸರು ನನ್ನ ಮರು ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತಾರೆ. ನಾನು ಠಾಣೆಯಲ್ಲಿ ಆರೋಪಿತರ ಹೆಸರುಗಳನ್ನು ಕೇಳಿರುತ್ತೇನೆ. ಅಲ್ಲದೇ ನನ್ನ ತಮ್ಮನ್ನು ಯಾವ ಕಾರಣಕ್ಕಾಗಿ ಕೊಲೆ ಮಾಡಿರುತ್ತಿರಿ ಅಂತಾ ಕೇಳಿದ್ದೆ. ಆಗ ಅವರು ಹೇಳಿದ್ದು ಈಗ ನನಗೆ ನೆನಪಿಲ್ಲ. ಆರೋಪಿತರು ನನ್ನ ತಮ್ಮನನ್ನು ಕಲ್ಲಿನಿಂದ ಮತ್ತು ಕೈಗಳಿಂದ ಹೊಡೆದು ಕೊಲೆ ಮಾಡಿರುತ್ತಾರೆ ಅಂತಾ ಗೊತ್ತಾಯಿತು.

<u>ಪಾಟೀ ಸವಾಲುಃ ಶ್ರೀ.ಜಿ.ಎ.ಎ.ವಕೀಲರಿಂದ ಆರೋಪಿತರ ಪರವಾಗಿ</u>

1) ನಾನು ನನ್ನ ಸ್ವಂತದ ಟಂಟಂ ವಾಹನ ಚಲಾಯಿಸುತ್ತೇನೆ. ಅದರ ನಂಬರ ಕೆ.ಎ.-28 ಸಿ-3113. ಪೋಲಿಸರು ದಿನಾಂಕ: 20-12-2020 ನನ್ನ ವಾಹನ ಆರ್.ಸಿ. ಬುಕ್ ಕೇಳಿಲ್ಲ. ನನ್ನ ವಾಹನ ತೆಗೆದುಕೊಂಡು ನಾನು ಬೆಳಿಗ್ಗೆ 10-00 ರಿಂದ 11-00 ಗಂಟೆ ಅವಧಿಯಲ್ಲಿ ಮನೆಯಿಂದ ಹೋಗಿರುತ್ತೇನೆ. ನನ್ನ ಮನೆಗೆ ಹೋಗಲು ಹಕಿಂ ಚೌಕನಿಂದ ಒಂದು ಪ್ರತ್ಯೇಕ ರಸ್ತೆ ಇದೆ. ರೈಲ್ವೇ ಸ್ಟೇಶನ್ ರಸ್ತೆ ಪೂರ್ವ-ಪಶ್ಚಿಮವಾಗಿ ಇದೆ ಅಂದರೆ ಸರಿ. ಗೋಲಗುಮ್ಮಜ ರಸ್ತೆಯು ಉತ್ತರ ದಿಕ್ಕಿಗೆ ಇದೆ ಅಂದರೆ ಸರಿ. ಗೋಲಗುಮ್ಮಜ ಎದುರಿಗೆ ಶಣ್ಮುಖ ಸ್ವಾಮಿ ರಸ್ತೆ ದ್ವಾರ ಇದೆ ಅಂದರೆ ಸರಿ. ಅದು ಹಕಿಂ ಚೌಕಕ್ಕೆ ಹೋಗುತ್ತದೆ ಅಂದರೆ ಸರಿ. ಗೋಲಗುಮ್ಮಜಕ್ಕೆ ನಮ್ಮ ಮನೆ ಸುಮಾರು 250 ಅಡಿ ದೂರದಲ್ಲಿ ಇದೆ. ಹಕಿಂ ಚೌಕನಲ್ಲಿ ಇದ್ದ ಜನರು ನನಗೆ ನನ್ನ ತಮ್ಮನ ಕೊಲೆ ಆಗಿದೆ ಅಂತಾ ಸುದ್ದಿ ಹೇಳಿದ್ದರು. ಈ ಸುದ್ದಿಯನ್ನು ಯಾರು ಹೇಳಿದ್ದರು ಅಂತಾ ನನಗೆ ಹೇಳಲಾಗುವುದಿಲ್ಲ. ಹಕಿಂ ಚೌಕದಿಂದ

ಗೋಲಗುಮ್ಮಟ ಪೋಲಿಸ ಠಾಣೆ ಸುಮಾರು ಒಂದು ಫರಲಾಂಗ ದೂರ ಇದೆ ಅಂದರೆ ಸರಿ. ಗೋಲಗುಮ್ಮಟ ಪೋಲಿಸ ಠಾಣೆಯ ಎಡಭಾಗದಲ್ಲಿ ನನ್ನ ಮನೆ ಇದೆ. ಸುದ್ದಿ ತಿಳಿದ ತಕ್ಷಣ ಗೋಲಗುಮ್ಮಟ ಪೋಲಿಸ ಠಾಣೆಗೆ ತೆರಳಿ ಫಿರ್ಯಾದಿ ನೀಡಬೇಕು ಅಂತಾ ಅನ್ನಿಸಿತ್ತೋ ಇಲ್ಲವೋ ಅಂದರೆ ಸಾಕ್ಷಿಯು ಆ ಬಗ್ಗೆ ನಾನು ಯೋಚನೆ ಮಾಡಿರಲಿಲ್ಲ ಅಂತಾ ನುಡಿದಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ನನ್ನ ವಾಹನದಲ್ಲಿ **4-5** ಜನ ಕುಟುಂಬದವರನ್ನು ಕರೆದುಕೊಂಡು ಹೋಗಿರುತ್ತೇನೆ. ನನಗೆ ಸಿ.ಪಿ.ಆಯ್. ಪಿ.ಎಸ್.ಆಯ್. ಪರಿಚಯ ಇದ್ದಾರೆ ಅಂದರೆ ಸರಿಯಲ್ಲ. ನನ್ನ ಡ್ರೈವಿಂಗ್ ಲೈಸನ್ಸ್ ಇದೆ. ನಾನು ಹೋಗುವುಷ್ಟರಲ್ಲಿ ಗೆಜ್ಜಿ ಪಿ.ಎಸ್.ಆಯ್. ಬಂದಿದ್ದರು ಅಂದರೆ ಸರಿ. ಸ್ಥಳದಲ್ಲಿ ಪಿ.ಎಸ್.ಆಯ್. ಘಟನೆ ಬಗ್ಗೆ ನನ್ನನ್ನು ವಿಚಾರಿಸಿದ್ದರು ಅಂದರೆ ಸರಿ. ಆಗ ಸ್ಥಳದಲ್ಲಿ ನನ್ನ ಸಹಿ ಪಡೆದ ಬಗ್ಗೆ ನೆನಪಿಲ್ಲ. ನಾನು ಮತ್ತು ನನ್ನ ತಂಗಿ ಮಗ ಇಬ್ಬರು ಸೇರಿ ಶವವನ್ನು ನನ್ನ ಟಂ ಟಂ ವಾಹನಕ್ಕೆ ಹಾಕಿರುತ್ತೇವೆ. ನನ್ನ ತಮ್ಮನ ಶರ್ಟಿಗೆ ರಕ್ತ ಹತ್ತಿತ್ತು. ಶವವನ್ನು ಟಂ ಟಂ ವಾಹನಕ್ಕೆ ಹಾಕುವ ಸಮದಯಲ್ಲಿ ಮೃತ ಶರೀರದಿಂದ ರಕ್ತ ನನ್ನ ಬಟ್ಟೆಗೆ ಸ್ವಲ್ಪ ಹತ್ತಿತ್ತು. ನನ್ನ ಬಟ್ಟೆಗಳನ್ನು ಪೋಲಿಸರು ತೆಗೆದುಕೊಳ್ಳಲಿಲ್ಲ. ನನ್ನ ಟಂ ಟಂ ವಾಹನದಲ್ಲಿ ಗಾದಿ ಹಾಕಿ ಅದರ ಮೇಲೆ ಶವವನ್ನು ಹಾಕಲಾಗಿತ್ತು. ಗಾದಿಯನ್ನು ಪೋಲಿಸರು ವಶಕ್ಕೆ ಪಡೆದುಕೊಂಡಿಲ್ಲ. ನಾನು ಅದನ್ನು ಹಾಸ್ಪಿಟಲನಲ್ಲಿ ಬಿಟ್ಟು ಬಂದಿರುತ್ತೇನೆ. ಶವವನ್ನು ಟಂಟಂ ವಾಹನಕ್ಕೆ ಹಾಕುವ ಸಮಯದಲ್ಲಿ ಪೋಲಿಸರು ಫೋಟೋಗಳನ್ನು ತೆಗೆದಿಲ್ಲ. ಶವವನ್ನು ಟಂಟಂ ವಾಹನಕ್ಕೆ ಹಾಕುವಾಗ ಸಂಜೆ **5-00** ರಿಂದ **7-00** ಗಂಟೆ ಆಗಿರಬಹುದು. ಮಾರನೇದಿನ **8-00** ರಿಂದ **11-00** ಗಂಟೆ ಒಳಗಾಗಿ ನನ್ನ ತಮ್ಮನ ಪಿ.ಎಮ್. ನಡೆಯಿಸಿ ಶವವನ್ನು ಹಸ್ತಾಂತರಿಸಿರುತ್ತಾರೆ. ಸರಕಾರಿ ಆಸ್ಪತ್ರೆಗೆ ಶವವನ್ನು ಕೊಂಡೊಯ್ಯುದು ಮಾರನೇದಿನ ಶವ ನನಗೆ ಹಸ್ತಾಂತ ಆಗುವವರೆಗೆ ಕೂಡಾ ನಾನು ಅಲ್ಲಿಯೇ ಇದ್ದೆ. ಮಾರನೇ ದಿನ ಬೆಳಿಗ್ಗೆ **11-00** ರಿಂದ **11-30** ಗಂಟೆ ಸುಮಾರಿಗೆ ಶವವನ್ನು ದಫನ ಮಾಡಿರುತ್ತೇನೆ.

**2)** ನನ್ನ ತಮ್ಮ **1** ನೇ ಆರೋಪಿಗೆ ರೂ. **2000/-**ಗಳನ್ನು ಕೊಡುವುದು ಬಾಕಿ ಇತ್ತು ಅಂತಾ ಸುಳ್ಳು ಸಾಕ್ಷಿ ನುಡಿದಿದ್ದೇನೆ ಅನ್ನುವುದು ಸರಿಯಲ್ಲ. **19** ನೇ ತಾರೀಖಿನಂದು ನನ್ನ

ತಮ್ಮನಿಗೆ ಹಲ್ಲೆ ಆಗಿದ್ದ ಬಗ್ಗೆ ಮೈಮೇಲಿನ ಗಾಯಗಳನ್ನು ನಾನು ನೋಡಿರುತ್ತೇನೆ. ಆತನ ಬೆನ್ನಿಗೆ ಹಲ್ಲೆ ಆಗಿತ್ತು. ಆ ದಿನ ಗಲಾಟೆ ಆದ ಬಗ್ಗೆ ಗೋಲಗುಮ್ಮಜ ಪೋಲಿಸ ಠಾಣೆಗೆ ಫಿರ್ಯಾದು ಕೊಟ್ಟಿಲ್ಲ. ನಾನು ಮನೆಯಿಂದ ಹೋಗುವಾಗ ದಿನಾಂಕ: **20-12-2020** ರಂದು ನನ್ನ ತಮ್ಮ ಆರೋಪಿತನ ಪಾನಶಾಪ ಹತ್ತಿರ ನಿಂತಿದ್ದನ್ನು ನೋಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ನುಡಿದಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯ ಪಾನಶಾಪ ಇಲ್ಲ ಅಂದರೆ ಸರಿಯಲ್ಲ. ನಾನು ಟಂ ಟಂ ವಾಹನದಲ್ಲಿ ಹೋಗುವಾಗ ನನ್ನ ತಮ್ಮ ಆರೋಪಿಯ ಪಾನಶಾಪ ಹತ್ತಿರ ನಿಂತಿದ್ದಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಟಂ ಟಂ ವಾಹನ ಇಲ್ಲ ಅನ್ನುವುದು ಸರಿಯಲ್ಲ. **1** ನೇ ಆರೋಪಿಯ ಪಾನಶಾಪ ಹತ್ತಿರ ನನ್ನ ತಮ್ಮ ನಿಂತಿದ್ದ ಬಗ್ಗೆ ಯಾವುದೇ ಮಹಜರ ಮಾಡಿಲ್ಲ ಮತ್ತು ಯಾವುದೇ ನಕಾಶೆ ಮಾಡಿಲ್ಲ. ನನ್ನ ತಮ್ಮನ ಶವ ಬಿದ್ದ ಸ್ಥಳದಲ್ಲಿ ಸುಮಾರು ಕಲ್ಲುಗಳು ಬಿದ್ದಿರುತ್ತೇವೆ ಅಂದರೆ ಸರಿಯಲ್ಲ. ಸದರಿ ಸ್ಥಳದಿಂದ ಎಮ್.ಓ.-**2** ರಿಂದ **7** ಇವುಗಳನ್ನು ಈ ಕೇಸಿಗಾಗಿ ತಂದು ಹಾಜರ ಪಡಿಸಲಾಗಿದೆ ಅಂದರೆ ಸರಿಯಲ್ಲ. ಫೋಟೋಗಳಲ್ಲಿ ಕಲ್ಲುಗಳನ್ನು ವಶಪಡಿಸಿಕೊಂಡ ಬಗ್ಗೆ ಮತ್ತು ಮಹಜರ ಮಾಡಿದ ಬಗ್ಗೆ ಯಾವುದು ನಮೂದು ಇಲ್ಲ ಅಂದರೆ ಸರಿಯಲ್ಲ.

**3)** ನನ್ನನ್ನು ಠಾಣೆಗೆ ಕರೆಯಿಸಿ ಅಲ್ಲಿ ಆರೋಪಿತರನ್ನು ತೋರಿಸಿದಾಗ ಆರೋಪಿತರು ನನ್ನ ತಮ್ಮನ ಕೊಲೆ ಮಾಡಿದ್ದರು ಅಂತಾ ಹೇಳಿದ್ದರು ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಬೇರೆ ಯಾರೋ ಮಾಡಿದ ಕೃತ್ಯವನ್ನು ಆರೋಪಿತನ ಮೇಲೆ ಪೋಲಿಸರೊಂದಿಗೆ ಶ್ಯಾಮಿಲಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅನ್ನುವುದ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ. )

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪೂರ.

**04/10/2023**